ಆದ್ದರಿಂದ ಕಾಲುಗಳಲ್ಲಿ ನೋವಾಗಿ ಕುಂಟುತ್ತವೆ. ಕೆಚ್ಚಲು ಮತ್ತು ಮೊಲೆಗಳ ಮೇಲೆ ಹುಣ್ಣಾಗುತ್ತವೆ. ರೋಗದಿಂದ ನರಳಿದ ರಾಸುಗಳು 1 ರಿಂದ 2 ವಾರುಗಳಲ್ಲಿ ಗುಣಮುಖವಾಗುತ್ತವೆ. ಆದರೆ ಅವು ಈ ರೋಗದ ದುಷ್ಪರಿಣಾಮಗಳಿಂದ ನರಳುತ್ತವೆ. ರಾಸುಗಳ ಬೆಳವಣಿಗೆ ಕುಂಠಿತವಾಗುತ್ತದೆ. ಕಾಲಿನ ಗೊರಸು ಕಿತ್ತು ಹೋಗುವುದು. ಬಿಸಿಲಿನಲ್ಲಿ ತೇಕುವುದು, ಹಾಲಿನಲ್ಲಿ ಇಳುವರಿಯಲ್ಲಿ ಗಣನೀಯವಾಗಿ ಇಳಿಮುಖ. ಸರಿಯಾಗಿ ಬೆದೆಗೆ ಬರದೆ ಇರುವುದು. ಬೆದೆಗೆ ಬರದೆ ರಾಸುಗಳಲ್ಲಿ ಗರ್ಭ ನಿಲ್ಲದೇ ಇರುವುದು. ಈ ರೋಗದಿಂದ ರೈತನಿಗೆ ತುಂಬಲಾರದ ಆರ್ಥಿಕ ಹಾನಿಯಗುವುದು. ಈ ರೋಗವನ್ನು ತಡೆಗಟ್ಟಲು ವರ್ಷಕ್ಕೆ ಎರಡು ಬಾರಿ ಒಮ್ಮೆ ಜನವರಿಯಲ್ಲಿ ಮತ್ತೊಮ್ಮೆ ಜುಲೈನಲ್ಲಿ ಲಸಿಕೆ ಹಾಕಿಸಬೇಕು. ರೋಗದಿಂದ ನರಳುವ ರಾಸುಗಳನ್ನು ಬೇರ್ಪಡಿಸಿ ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಬೇಕು. ದನಗಳನ್ನು ಮತ್ತು ದನಗಳ ಕೊಟ್ಟಿಗೆಯನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳಬೇಕು.

**2) ಹುಚ್ಚು ನಾಯಿ ರೋಗ (ರೇಬಿಸ) :** ಎಲ್ಲಾ ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ರೇಬೀಸ್ ಎನ್ನುವ ಅತಿ ಸೂಕ್ಷ್ಮಾಣುವಿನಿಂದ ರೇಬೀಸ್ ಬರುತ್ತದೆ. ಈ ರೋಗವು ಕಾಡು ಪ್ರಾಣಿಗಳಾದ ನರಿ, ತೋಳಗಳು ಮತ್ತು ಬಾವಲಿಗಳು ಕಡಿಯುವುದರಿಂದ ನಾಯಿಗಳಿಗೆ ಬರುತ್ತದೆ. ನಂತರ ಈ ಹುಚ್ಚು ನಾಯಿಗಳು ಬೇರೆ ಎಲ್ಲಾ ಪ್ರಾಣಿಗಳಲ್ಲಿ ಮತ್ತು ಮನುಷ್ಯರಿಗೆ ಕಡಿಯುವುದರಿಂದ ಕಡಿದ 14 ದಿನಗಳಿಂದ ಒಂದು ವರ್ಷದ ನಂತರೂ ಪ್ರಾಣಿಗಳಿಂದ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಒಮ್ಮೆ ರೋಗದ ಲಕ್ಷಣಗಳು ಕಾಣಿಸಿಕೊಂಡ ಬಳಿಕ ಯಾವುದೇ ಚಿಕಿತ್ಸೆ ಇರುವುದಿಲ್ಲ ಮತ್ತು ಕೆಲವೇ ದಿನಗಳೊಳಗೆ ಸಾವನ್ನಪ್ಪವವು. ಬಾಯಿಯಲ್ಲಿ ಒಂದೇ ಸಮನೆ ಜೊಲ್ಲು ಸುರಿಸುವುದು, ಒದರುವುದು, ಹಾಯುವುದು, ನೀರನ್ನು ಕಂಡರೆ ಭಯ ಬೀಳುವುದು ಮುಂತಾದ ಲಕ್ಷಣಗಳು ಕಂಡು ಬರುತ್ತದೆ. ಈ ರೋಗವು ನಾಯಿಗಳಿಂದ ಇತರ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಬರುವುದರಿಂದ ಈ ರೋಗವು ಬರದಂತೆ ತಡೆಗಟ್ಟಲು ಎಲ್ಲಾ ನಾಯಿಗಳಿಗೂ ಚುಚ್ಚು ಮದ್ದನ್ನು ಪ್ರತಿವರ್ಷ ತಪ್ಪದೇ ಹಾಕಿಸಬೇಕು.

### ನಿಯಂತ್ರಣಾ ಕ್ರಮಗಳು

1) ಬೀದಿ ನಾಯಿಗಳ ನಿಯಂತ್ರಣ : ಏಕೆಂದರೆ ಈ ನಾಯಿಗಳಿಂದ ಹುಚ್ಚು ನಾಯಿ ರೋಗವು ಬೇರೆ ಪ್ರಾಣಿಗಳಿಗೆ ಹರಡುತ್ತದೆ.

2) ಹುಚ್ಚು ನಾಯಿ ರೋಗದಿಂದ ನರಳುವ ಪ್ರಾಣಿಗಳನ್ನು ಮುಟ್ಟಬಾರದು. ಅದನ್ನು ಪಶುವೈದ್ಯರಿಂದ ಪರೀಕ್ಷಿಸಿ ನಂತರ 10–14 ದಿವಸ ಕಟ್ಟಿ ಹಾಕಿ ಅದನ್ನು ನೋಡಿಕೊಳ್ಳಬೇಕು.

3) ಹುಚ್ಚು ನಾಯಿ ಕಡಿದ ಪ್ರಾಣಿಗಳನ್ನು ಕೂಡಲೇ ಪಶುವೈದ್ಯರಿಗೆ ತೋರಿಸಿ ಔಷದೋಪಚಾರ ಮಾಡಿಸಬೇಕು

4) ಹುಚ್ಚು ನಾಯಿ ರೋಗದಿಂದ ನರಳುತ್ತಿರುವ ಪ್ರಾಣಿಗಳನ್ನು ನೋಡಿಕೊಳ್ಳುತ್ತಿರುವವರು / ಮುಟ್ಟಿದವರು ಕೂಡ ರೇಬೀಸ್ ರೋಗವು ಬಾರದಂತೆ ಚುಚ್ಚು ಮದ್ದನ್ನು ಹಾಕಿಸಿಕೊಳ್ಳಬೇಕು.

### ಚಿಕಿತ್ಸೆಯಿಲ್ಲದ ರೇಬೀಸ್ ಕಾಯಿಲೆಗೆ ಲಸಿಕೆಯೊಂದೇ ಮದ್ದು

### ಮುಂಜಾಗ್ರತಾ ಕ್ರಮವಾಗಿ ಲಸಿಕೆ ಹಾಕಿಸುವ ವೇಳಾಪಟ್ಟಿ

ಮೂರು ತಿಂಗಳ ನಾಯಿ ಮರಿಗೆ ಪ್ರಥಮ ಲಸಿಕೆ ಕೊಡಬೇಕು. ಆದಾ ಒಂದು ತಿಂಗಳಿನ ನಂತರ ಬೂಸ್ಟರ ಲಸಿಕೆ ಕೊಡಬೇಕು ಮತ್ತು ಪ್ರತಿ ವರ್ಷ ಲಸಿಕೆಯನ್ನು ಹಾಕಿಸಬೇಕು.

### ಹುಚ್ಚು ನಾಯಿ ಕಡಿತಕ್ಕೊಳಗಾದ ಜನ ಮತ್ತು ಜಾನುವಾರುಗಳಿಗೆ ಲಸಿಕೆಯನ್ನು ಹಾಕಿಸಬೇಕಾದ ಚಿಕಿತ್ಸಾ ಕ್ರಮಗಳು

| | |
|---|---|
| 1 ನೇ ಲಸಿಕೆ ಪ್ರಯೋಗ | ಕಚ್ಚಿದ ದಿನ |
| 2 ನೇ ಲಸಿಕೆ ಪ್ರಯೋಗ | 3ನೇ ದಿನ |
| 3 ನೇ ಲಸಿಕೆ ಪ್ರಯೋಗ | 7ನೇ ದಿನ |
| 4 ನೇ ಲಸಿಕೆ ಪ್ರಯೋಗ | 14ನೇ ದಿನ |
| 5 ನೇ ಲಸಿಕೆ ಪ್ರಯೋಗ | 30ನೇ ದಿನ |
| 6 ನೇ ಲಸಿಕೆ ಪ್ರಯೋಗ | 90ನೇ ದಿನ |

ಲೇಖಕರು
ಡಾ. ಎಸ್. ವಾಯ್. ಮುಕರ್ತಾಳ
ಡಾ. ಕೆ. ಬಿ. ಯಡಹಳ್ಳಿ, ಡಾ. ಬಿ. ಸಿ. ಹನುಮಂತಸ್ವಾಮಿ
ಡಾ. ಟಿ. ಎಂ. ಸೌಮ್ಯ, ಶ್ರೀಮತಿ ಗೀತಾ ಕಳಕನವರ
ಶ್ರೀ ಎಂ. ಎ. ಗದ್ದನಕೇರಿ
ಶ್ರೀಮತಿ ಸಾಯಿರಾಬಾನು ಮುಗನೂರ

ಪ್ರಕಾಶಕರು : ಡಾ. ಎಂ. ವಿ. ನಾಗರಾಜ
ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ,
ದೂರವಾಣಿ : 08373-253524. email : kvk_haveri@rediffmail.com
ಅಕ್ಷರ ವಿನ್ಯಾಸ : ಕು. ರೇಖಾ ಕೆ. ಎನ್. ಮತ್ತು
ಶ್ರೀಮತಿ ಸರೋಜಾ ತಳವಾರ
ಮುದ್ರಣ : ಮುದ್ರಣ ಭಾರತಿ, ರಾಣೇಬೆನ್ನೂರು.

## ಕೃಷಿ ವಿಶ್ವವಿದ್ಯಾಲಯ, ಧಾರವಾಡ

# ದನ ಕರುಗಳಿಗೆ ಬರುವ ಸಾಮಾನ್ಯ ರೋಗಗಳು ಮತ್ತು ಅವುಗಳ ಹತೋಟಿ ಕ್ರಮಗಳು



## ಕೃಷಿ ವಿಜ್ಞಾನ ಕೇಂದ್ರ

ಹನುಮನಮಟ್ಟಿ

ತಾ॥ ರಾಣೇಬೆನ್ನೂರು ಜಿ॥ ಹಾವೇರಿ.

# ದನ ಕರುಗಳಿಗೆ ಬರುವ ಸಾಮಾನ್ಯ ರೋಗಗಳು ಮತ್ತು ಅವುಗಳ ಹತೋಟಿ ಕ್ರಮಗಳು

ಜಾನುವಾರು ಸಾಕಣೆಯಲ್ಲಿ ತಳಿ ಆಯ್ಕೆ, ಸಂವರ್ಧನೆ ಮತ್ತು ಆಹಾರ ನಿರ್ವಹಣೆಯಷ್ಟೇ ಪ್ರಾಮುಖ್ಯವಾದ ಅಂಶವೆಂದರೆ ಜಾನುವಾರುಗಳನ್ನು ನಾನಾ ಬಗೆಯ ರೋಗಗಳಿಂದ ರಕ್ಷಿಸುವುದು. ಜಾನುವಾರುಗಳಿಗೆ ಬರುವ ನಾನಾ ರೋಗಗಳಿಂದ ಬೆಳವಣಿಗೆ ಕುಂಠಿತವಾಗುವಿಕೆ, ಉತ್ಪಾದನೆ ಇಳಿಮುಖವಾಗುವುದು ಮತ್ತು ಜೀವಹಾನಿ ಉಂಟಾಗಿ ತೀವ್ರ ನಷ್ಟ ಅನುಭವಿಸಬೇಕಾಗಬಹುದು. ಕಾಯಿಲೆಯನ್ನು ಗುಣಪಡಿಸುವುದಕ್ಕಿಂತ ಕಾಯಿಲೆ ಬರದಂತೆ ನೋಡಿಕೊಳ್ಳುವುದು ಒಳ್ಳೆಯದು ಎನ್ನುವ ನಾಣ್ಣುಡಿಯಂತೆ ಜಾನುವಾರು ಮಾಲೀಕರು ತಮ್ಮ ರಾಸುಗಳಿಗೆ ಬರುವ ರೋಗಗಳ ಬಗ್ಗೆ ತಿಳುವಳಿಕೆ ಹೊಂದಿ ಸೂಕ್ತ ನಿವಾರಣಾ ಉಪಾಯಗಳನ್ನು ಕಂಡುಕೊಳ್ಳುವುದು ಅತೀ ಅವಶ್ಯಕವಾಗಿದೆ.

ಜಾನುವಾರುಗಳಿಗೆ ಬರುವ ರೋಗಗಳನ್ನು ಈ ಕೆಳಕಂಡಂತೆ ವರ್ಗೀಕರಿಸಬಹುದು.

1) ಬ್ಯಾಕ್ಟೀರಿಯಾ (ಸೂಕ್ಷ್ಮಾಣು ಜೀವಿ) ಗಳಿಂದ ಬರುವ ರೋಗಗಳು
2) ವೈರಸ್ (ನಂಜಾಣು) ನಿಂದ ಬರುವ ರೋಗಗಳು
3) ಪರೋಪ ಜೀವಿಗಳಿಂದ ಬರುವ ರೋಗಗಳು
4) ಪೋಷಣೆಯ (ಉತ್ಪಾದನಾ) ವ್ಯತ್ಯಯದಿಂದ ಬರುವ ರೋಗಗಳು

## ಅ) ಬ್ಯಾಕ್ಟೀರಿಯಾಗಳಿಂದ ಬರುವ ರೋಗಗಳು

**1) ಗಂಟಲು ಬೇನೆ:** ಈ ರೋಗವು ಪ್ಯಾಶ್ಚುರೆಲ್ಲಾ ಮಲ್ಟೋಸಿಡಾ ಎಂಬ ಬ್ಯಾಕ್ಟೀರಿಯಾದಿಂದ ಆಕಳು, ಎಮ್ಮೆ, ಕುರಿ, ಆಡು ಮತ್ತು ಹಂದಿಗಳಲ್ಲಿ ಕಂಡು ಬರುತ್ತದೆ. ಈ ರೋಗವು ಕಲುಷಿತವಾದ ಆಹಾರ ಮತ್ತು ನೀರಿನ ಸೇವನೆಯಿಂದ ಹರಡುತ್ತದೆ. ರೋಗದ ಮುಖ್ಯ ಲಕ್ಷಣಗಳೆಂದರೆ ವಿಪರೀತ ಜ್ವರ, ಜೊಲ್ಲು ಸುರಿಸುವುದು, ಗಂಟಲು ಮತ್ತು ಕುತ್ತಿಗೆ ಭಾಗದಲ್ಲಿ ನೀರು ತುಂಬಿದ ಬಾವು. ಉಸಿರಾಟದಲ್ಲಿ ತೊಂದರೆ, ಹಾಲು ಉತ್ಪಾದನೆಯಲ್ಲಿ ಗಣನೀಯ ಇಳಿಕೆ. 5–6 ದಿನಗಳಲ್ಲಿ ಸಾವು. ಈ ರೋಗಕ್ಕೆ ಲಸಿಕೆ ಲಭ್ಯವಿದ್ದು, ಎಲ್ಲಾ ಜಾನುವಾರುಗಳಿಗೆ ವರ್ಷಕ್ಕೆ 2 ಬಾರಿ ಲಸಿಕೆ ಹಾಕಿಸಬೇಕು. ರೋಗ ಪೀಡಿತ ರಾಸುಗಳನ್ನು ಬೇರ್ಪಡಿಸಿ ಪಶು ವೈದ್ಯರಿಂದ ಸೂಕ್ತ ಚಿಕಿತ್ಸೆ ಕೊಡಿಸಬೇಕು.

**2) ಚಪ್ಪೆ ರೋಗ :** ಕ್ಲಾಸ್ಟ್ರಿಡಿಯಂ ಚವಾಯ ಎಂಬ ಸೂಕ್ಷ್ಮಾಣುವಿನಿಂದ ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಮುಖ್ಯವಾಗಿ ಕಂಡು ಬರುತ್ತದೆ. ರೋಗವು ಸೋಂಕು ಕಲುಷಿತ ಆಹಾರ ಮತ್ತು ನೀರು ಸೇವಿಸುವುದರಿಂದ ಹರಡುತ್ತದೆ. ರೋಗದ ಮುಖ್ಯ ಲಕ್ಷಣಗಳೆಂದರೆ ವಿಪರೀತ ಜ್ವರ, ಚಪ್ಪೆ ಭಾಗದ ಮಾಂಸಖಂಡಗಳು ಬಾತು ಕೊಳ್ಳುವುದು. ಬಾವು ಬಂದ ಜಾಗದ ಮೇಲೆ ಕೈಯಾಡಿಸಿದಾಗ ಪರ್ ಪರ್ ಎಂಬ ಶಬ್ದವಾಗುವುದು, ಕುಂಟುವುದು 1 ರಿಂದ 5 ದಿನಗಳಲ್ಲಿ ಮರಣ. ಈ ರೋಗವು ಮುಂಗಾರು ಮಳೆಯ ಸಮಯದಲ್ಲಿ ಕಾಣಿಸಿಕೊಳ್ಳವುದರಿಂದ ಅದಕ್ಕೆ ಮೊದಲು ಲಸಿಕೆಯನ್ನು ಹಾಕಿಸುವುದರಿಂದ ರೋಗ ಬರದಂತೆ ತಡೆಯಬಹುದು.

**3) ನೆರಡಿ ರೋಗ (ಅಂತ್ರ್ಯಾಕ್ಸ್) :** ಬ್ಯಾಸಿಲಸ್ ಅಂತ್ರ್ಯಾಸಿಸ್ ಎಂಬ ಸೂಕ್ಷ್ಮಾಣುವಿನಿಂದ ಈ ರೋಗ ದನಗಳಲ್ಲಿ ಕುದುರೆ ಮತ್ತು ಮನುಷ್ಯರಲ್ಲಿ ಕಂಡು ಬರುತ್ತದೆ. ಸೋಂಕು ಕಲುಷಿತ ಆಹಾರ ಮತ್ತು ನೀರು ಸೇವಿಸುವುದರಿಂದ ಮತ್ತು ಉಸಿರಾಡುವುದರಿಂದ ಈ ರೋಗವು ಹರಡುತ್ತದೆ. ರೋಗದ ಲಕ್ಷಣಗಳೆಂದರೆ ವಿಪರೀತ ಜ್ವರ, ಇದ್ದಕ್ಕಿದ್ದ ಹಾಗೆ ಬಿದ್ದು ಕೆಲವು ಪ್ರಾಣಿಗಳು ಕೂಡಲೇ ಸಾಯುವವು. ದೇಹದ ದ್ವಾರಗಳಿಂದ ಅಂದರೆ ಮೂಗು, ಕಿವಿ, ಬಾಯಿ, ಗುದದ್ವಾರ ಹಾಗೂ ಯೋನಿಯಿಂದ ಕಪ್ಪು ಬಣ್ಣದ ರಕ್ತವು ಹೊರಬರುತ್ತದೆ. ಈ ರೋಗಕ್ಕೆ ಸಹಾ ಲಸಿಕೆ ಲಭ್ಯವಿದ್ದು ಎಲ್ಲಾ ಜಾನುವಾರುಗಳಿಗೆ ವರ್ಷಕ್ಕೆ ಒಂದು ಬಾರಿ ರೋಗ ನಿರೋಧಕ ಲಸಿಕೆ ಹಾಕಿಸಬೇಕು. ಈ ಕಾಯಿಲೆಯಿಂದ ಸತ್ತ ಬಳಿಕವೂ ರೋಗಾಣುಗಳು ಕ್ರಿಯಾಶೀಲವಾಗಿರುವುದರಿಂದ ಮತ್ತು ಪ್ರಾಣಿ ಮನುಷ್ಯರ ನಡುವೆ ರೋಗ ಹರಡುವ ಸಾಧ್ಯತೆಯಿರುವುದರಿಂದ ದೇಹವನ್ನು ಮರಣೋತ್ತರ ಪರೀಕ್ಷೆ ಮಾಡಿಸಬಾರದು. ಈ ರೋಗದಿಂದ ಸತ್ತ ಪ್ರಾಣಿಗಳ ದೇಹವನ್ನು ಭೂಮಿಯಲ್ಲಿ ಆಳವಾಗಿ ಗುಂಡಿ ತೆಗೆದು ಸುಣ್ಣ ಮತ್ತು ಉಪ್ಪನ್ನು ಹಾಕಿ ಮುಚ್ಚಬೇಕು.

**4) ಬ್ರೂಸೆಲ್ಲೋಸಿಸ್ (ಕಂದು ಹಾಕುವ ರೋಗ) :** ಈ ರೋಗವು ಬ್ರುಸೆಲ್ಲಾ ಅಬಾರ್ಟ್ಸ್ ಎನ್ನುವ ಸೂಕ್ಷ್ಮಾಣುವಿನಿಂದ ಆಕಳು, ಎಮ್ಮೆ, ಕಾಡು ಪ್ರಾಣಿಗಳು ಮತ್ತು ಮನುಷ್ಯರಲ್ಲಿ ಕಂಡುಬರುತ್ತದೆ. ಈ ರೋಗವು ಸೋಂಕು ಕಲುಷಿತ ಆಹಾರ, ನೀರು ಸೇವಿಸುವುದರಿಂದ, ಉಸಿರಾಟದಿಂದ ಕಣ್ಣು ಮತ್ತು ಚರ್ಮದ ಮೂಲಕ, ಕೃತಕ ಗರ್ಭಧಾರಣೆಯಿಂದ, ಸೋಂಕು ಹೊಂದಿದ ಹೋರಿಯ ಲೈಂಗಿಕ ಸಂಪರ್ಕದಿಂದ ಹರಡುತ್ತದೆ. ರೋಗದ ಮುಖ್ಯ ಲಕ್ಷಣಗಳೆಂದರೆ ಗರ್ಭ ಧರಿಸಿದ ಜಾನುವಾರುಗಳಲ್ಲಿ 5–6 ತಿಂಗಳ ಅವಧಿಯ ಗರ್ಭಪಾತ ಆಗಬಹುದು. ಮಾಸ ಬಿಳದೇ ಇರುವುದು, ಗರ್ಭಾಶಯದ ಕಾಯಿಲೆ, ಕೀಲು ನೋವು ಇತ್ಯಾದಿ. ಇದರ ನಿವಾರಣೆಯೆಂದರೆ 5–6 ತಿಂಗಳ ಕರುಗಳಿಗೆ ಲಸಿಕೆ ಹಾಕಿಸುವುದು, ರೋಗ ಪೀಡಿತ ರಾಸುಗಳನ್ನು ಬೇರ್ಪಡಿಸಿ ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ಮಾಡಿಸುವುದು. ರೋಗದಿಂದ ನರಳುತ್ತಿರುವ ಹೋರಿಗಳ ವೀರ್ಯಾಣುವನ್ನು ಕೃತಕ ಇಲ್ಲವೇ ನೈಸರ್ಗಿಕ ಗರ್ಭಧಾರಣೆಯಲ್ಲಿ ಬಳಸಬಾರದು.

**5) ಕೆಚ್ಚಲುಬಾವು :** ನಾನಾ ಜಾತಿಯ ಸೂಕ್ಷ್ಮಾಣುಗಳಿಂದ ಈ ರೋಗವು ಆಕಳು ಮತ್ತು ಎಮ್ಮೆಗಳಲ್ಲಿ ಬರುತ್ತದೆ. ರೋಗದಿಂದ ಹಾಲಿನ ಉತ್ಪಾದನೆ ತೀವ್ರ ಕುಂಠಿತವಾಗುವುದಲ್ಲದೆ, ಸೂಕ್ತ ಚಿಕಿತ್ಸೆ ನೀಡದಿದ್ದರೆ ರಾಸುಗಳು ಮರಣ ಹೊಂದಬಹುದು. ಮುಖ್ಯವಾಗಿ ಈ ರೋಗವು ದೂಷಿತ ಹಾಲು ಹಿಂಡುವ ಕ್ರಮ, ಸ್ವಚ್ಛವಲ್ಲದ ಕೈಗಳು ಮತ್ತು ಹಾಲು ಹಿಂಡುವ ಯಂತ್ರಗಳಿಂದ ಹರಡುತ್ತದೆ. ಮೊಲೆ ಮತ್ತು ಮೊಲೆ ತೊಟ್ಟಿನ ಮೇಲೆ ಗಾಯಗಳಾದಾಗ ವಿಷ ಕ್ರಿಮಿಗಳು ಮೊಲೆಗೆ ಹೋಗಿ ಕೆಚ್ಚಲು ಬಾವನ್ನುಂಟು ಮಾಡುತ್ತವೆ. ದನಗಳು ಮತ್ತು ಕೊಟ್ಟಿಗೆಯ ಸ್ವಚ್ಛತೆ ಕಾಪಾಡದಿದ್ದರೆ ಈ ರೋಗವು ಹರಡುತ್ತದೆ.

ಈ ರೋಗ ಬಂದಾಗ ಕೆಚ್ಚಲು ಬಾತುಕೊಂಡಿರುತ್ತದೆ ಮತ್ತು ಕೆಚ್ಚಲಿನಲ್ಲಿ ಅತಿಯಾದ ನೋವು, ಹಾಲು ಕೆಟ್ಟಿರುತ್ತದೆ. ಕೆಲವೊಮ್ಮೆ ರಕ್ತದಿಂದ ಕೂಡಿರುವುದು, ಹಾಲು ನೀರಿನಂತೆಯೂ ಅಥವಾ ಮೊಸರಿನಂತೆಯೂ ಇರಬಹುದು. ಕೆಲವು ಸಾರಿ ವಿಪರೀತ ಜ್ವರ ಬರಬಹುದು. ಸೂಕ್ತ ಸಮಯದಲ್ಲಿ ಚಿಕಿತ್ಸೆ ಕೊಡಿಸದಿದ್ದರೆ ರಾಸುಗಳಲ್ಲಿ ಸಾವು ಕಾಣಬಹುದು.

### ರೋಗದ ಹತೋಟಿ ಕ್ರಮಗಳು

1) ರಾಸುಗಳನ್ನು ಮತ್ತು ಅವುಗಳ ಕೆಚ್ಚಲುಗಳನ್ನು ಸ್ವಚ್ಛವಾಗಿಡುವುದು
2) ದನಗಳ ಕೊಟ್ಟಿಗೆಯು ಸ್ವಚ್ಛ ಮತ್ತು ಒಣಗಿರುವ ಹಾಗೆ ಇಡುವುದು
3) ಹಾಲನ್ನು ಹಿಂಡುವಾಗ ಸ್ವಚ್ಛತೆ ಕಾಪಾಡುವುದು
4) ಹಾಲು ಹಿಂಡಿದ ನಂತರ ಮೊಲೆಯ ತೊಟ್ಟನ್ನು 1–2 ಚಮಚ ಸೆವಾಲನ್ ಅಥವಾ ಡೆಟಾಲನ್ನು 1 ಲೀ ನೀರಿನಲ್ಲಿ ಮಿಶ್ರಣ ಮಾಡಿದ ದ್ರಾವಣದಲ್ಲಿ 2–3 ನಿಮಿಷ ಅದ್ದಬೇಕು.
5) ನಿಯಮಿತವಾಗಿ ರೋಗಕ್ಕಾಗಿ ಹಾಲಿನ ಪರೀಕ್ಷೆ ಮಾಡಿಸುವುದು

## ಆ) ಅತಿ ಸೂಕ್ಷ್ಮಾಣು (ವೈರಸ್) ನಿಂದ ಬರುವ ರೋಗಗಳು

**1) ಕಾಲು ಬಾಯಿ ಜ್ವರ :** ಈ ರೋಗವು ಕಾಲು ಬಾಯಿ ಬೇನೆ ಎಂಬ ಅತಿ ಸೂಕ್ಷ್ಮಾಣುವಿನಿಂದ ಆಕಳು, ಎಮ್ಮೆ, ಹಂದಿ, ಕುರಿ ಮತ್ತು ಮೇಕೆಗಳಲ್ಲಿ ಕಂಡುಬರುತ್ತದೆ. ಸೋಂಕು ಕಲುಷಿತ ನೀರು ಮತ್ತು ಆಹಾರವನ್ನು ಸೇವಿಸುವುದರಿಂದ ಹಾಗೂ ಉಸಿರಾಡುವುದರಿಂದ ಹರಡುತ್ತದೆ. ವಿಪರೀತ ಜ್ವರ, ನೀರು ಮತ್ತು ಆಹಾರ ಸೇವನೆ ಮಾಡುವುದಕ್ಕೆ ಆಗುವುದಿಲ್ಲ. ಬಾಯಿಯಲ್ಲಿ ಮತ್ತು ನಾಲಿಗೆಯ ಮೇಲೆ ಮೊದಲು ಗುಳ್ಳೆಗಳು ಕಾಣಿಸಿಕೊಂಡು ನಂತರ ಅವು ಒಡೆದು ಹುಣ್ಣುಗಳಾಗುತ್ತವೆ. ಬಾಯಿಯಿಂದ ಒಂದೇ ಸಮನೆ ಜೊಲ್ಲು ಸೋರುತ್ತದೆ. ಕಾಲಿನ ಗೊರಸುಗಳ ಮಧ್ಯ ಹುಣ್ಣುಗಳಾಗಿ ನಂತರ